

## ಸಮೋऽಹಂ ಸರ್ವಭೂತೇಷು

ಹಜರತ್ ಇಬ್ರಾಹಿಂ ಜನರ ಕಷ್ಟಪರಿಹಾರಕ್ಕಾಗಿಯೇ ತನ್ನ ಜೀವನವನ್ನು ಮುಡಿಪಾಗಿರಿಸಿದ್ದನು. ಬಡಜನರಿಗಾಗಿ ಅವನ ಮನೆಯ ಬಾಗಿಲು ಯಾವಾಗಲೂ ತೆರೆದಿರುತ್ತಿತ್ತು. ಆದರೆ ಅವನ ಹೃದಯದ ಬಾಗಿಲು ಇನ್ನೂ ಸಂಪೂರ್ಣ ತೆರೆದಿರಲಿಲ್ಲ.

ಒಂದು ದಿನ ಹಜರತ್ ಇಬ್ರಾಹಿಂ ಮನೆಯ ಮುಂದೆ ನೊಂದವರ ಸೇವೆಗಾಗಿ ಕಾಯುತ್ತ ಕುಳಿತಿದ್ದ. ಸಂಜೆಯ ಹೊತ್ತಿಗೆ ನೂರು ವರ್ಷದ ವೃದ್ಧನೊಬ್ಬ ಬಂದನು. ತುಂಬ ಸೊರಗಿದ್ದನು. ಜೀವನದ ಭಾರ ಅವನನ್ನು ಬಾಗಿಸಿತ್ತು. ಇಬ್ರಾಹಿಂ ಆತನನ್ನು ಆದರದಿಂದ ಬರಮಾಡಿಕೊಂಡು ಮನೆಯೊಳಗೆ ಕರೆದುಕೊಂಡು ಹೋಗಿ ಉಪಚರಿಸಿದನು. ರಾತ್ರಿ ಊಟದ ಸಮಯಕ್ಕೆ ಆತನಿಗೆ ಊಟ ಬಡಿಸಿದನು. ವೃದ್ಧನು ತುಂಬ ಹಸಿದಿದ್ದರಿಂದ ಕೂಡಲೆ ಗಬಗಬನೆ ಉಣ್ಣತೊಡಗಿದನು. ಇದನ್ನು ನೋಡಿ ಹಜರತ್ ಕೇಳಿದ, "ಏನಯ್ಯ ಇದು! ಅನ್ನ ಕೊಡಿಸಿದ ದೇವರನ್ನು ನೆನೆಯಬೇಡವೆ?" ಎಂದು.

"ನಾವು ಅಗ್ನಿ ಆರಾಧಕರು. ದೇವರನ್ನು ಪ್ರಾರ್ಥಿಸುವ ರೂಢಿ ನಮಗಿಲ್ಲ" ಎಂದು ವೃದ್ಧ ಸ್ವಲ್ಪ ಗಡುಸಾಗಿಯೇ ಉತ್ತರಿಸಿದ.

ಹಜರತ್‌ನಿಗೆ ತುಂಬ ನೋವಾಯಿತು, ಕೋಪವೂ ಬಂತು. ಇದು ದೈವಾಪರಾಧವೆಂದು ಅವನು ಬಗೆದನು. ಕೂಡಲೆ ಆ ನಡುರಾತ್ರಿಯೇ ಅವನು ಆ ವೃದ್ಧನನ್ನು ಅಲ್ಲಿಂದ ಓಡಿಸಿದನು.

ದೇವರನ್ನು ನಂಬದ ಕಾಫಿರನಿಗೆ ನಾನು ಉಣಬಡಿಸಿದೆನಲ್ಲ ಎಂದು ಹಜರತ್ ಇಬ್ರಾಹಿಂ ನೊಂದುಕೊಳ್ಳುತ್ತಿರುವಾಗ, "ಆ ವೃದ್ಧನೆಲ್ಲಿ?" ಎಂಬ ದೈವವಾಣಿ ಕೇಳಿಸಿತು. "ನಿನ್ನನ್ನೇ ನೆನೆಯದವನನ್ನು ನಾನು ಹೇಗೆ ಸಹಿಸಲಿ?" ಎಂದು ಹಜರತ್ ಹೇಳಿದ.

"ಏಕೆ? ನನ್ನನ್ನು ನಂಬದ ಅವನನ್ನು ನೂರು ವರ್ಷ ಸಾಕಿದ್ದೇನೆ. ಆದರೆ ನಿನಗೆ ಒಂದು ಹೊತ್ತು ಊಟ ಕೊಡಲು ಆಗಲಿಲ್ಲವೇ?" ಈ ದೈವವಾಣಿ ಇಬ್ರಾಹಿಂನ ಹೃದಯವನ್ನು ಸಂಪೂರ್ಣ ತೆರೆಸಿತು.

**ಸೂರ್ಯಕಿರಣ ಒಳಿತು ಕೆಡುಕನ್ನೆಣಿಸದೆ ಎಲ್ಲವನ್ನೂ ಬೆಳಗುವಂತೆ ಭಗವಂತನು ಎಲ್ಲರನ್ನೂ ಸಲಹುತ್ತಿರುವನು.**

(ವಿ|ಶ)